ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ ಅವರಿನ್ನೂ ಹಳೆಯ ಗುಂಗಿನಲ್ಲಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸ್ವಾಮಿ, ತಾವು ದಯವಿಟ್ಟು ಬೇಜಾರು ಮಾಡಿಕೊಳ್ಳಬೇಡಿ. ಈಗ ಸಮಯ 11.15 ಆಯಿತು. ತಾವು ಒಬ್ಬರನ್ನು ಬಿಟ್ಟರೆ ಮೊದಲನೇ ಸಾಲಿನಲ್ಲಿ ಕುಳಿತುಕೊಳ್ಳುವ ಸಚಿವ ಮಹನೀಯರುಗಳು ಯಾರೂ ಸಹಿತ ಸದನಕ್ಕೆ ಬಂದಿಲ್ಲ. ಪಾಪ! ಮಾನ್ಯ ಮುಖ್ಯಮಂತ್ರಿಗಳು ಒಬ್ಬರು ಬಂದು ಕುಳಿತುಕೊಳ್ಳುತ್ತಾರೆ ಎನ್ನುವುದು ಬಿಟ್ಟರೆ ಯಾರು ಬರುತ್ತಾರೆ? ದಯವಿಟ್ಟು ಹೇಳಿ. ಕ್ವೆಶ್ಚನ್ ಹವರ್‌ನಲ್ಲಿ ಸಂಬಂಧಪಟ್ಟ ಮಂತ್ರಿಗಳೇ ಬರುವುದಿಲ್ಲ ಎನ್ನುವುದು ತಮಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೆ, ತಾವೇ ಇಲ್ಲಿ ಮಂತ್ರಿಗಳು ಅನುಸರಿಸುತ್ತಿರುವ ಧೋರಣೆಯನ್ನು ಆ ಸ್ಥಾನದಿಂದ ಕುಳಿತುಕೊಂಡು ಖಂಡನೆ ಮಾಡಿರತಕ್ಕದ್ದೂ ಉಂಟು.

ಅಧ್ಯಕ್ಷರು : ಇವತ್ತು ಎಲ್ಲಾ ಮಂತ್ರಿಗಳೂ ಇದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ ಅಡ್ಜರ್ನ್‌ಮೆಂಟ್ ಮೋಷನ್ ಫಾರ್ಮ ತಲುಪಲಿಲ್ಲ ಎನ್ನುವುದಕ್ಕಾಗಿ ಇದರ ಕಛೇರಿಯಲ್ಲಿ ಏನಾದರೂ ತಪ್ಪು ಇರಬಹುದು ಅಷ್ಟೇ ಹೊರತು ನಮ್ಮಿಂದೇನೂ ತಪ್ಪಾಗಿಲ್ಲ.

ಅಧ್ಯಕ್ಷರು : ಮಾನ್ಯ ಸಿಂಧ್ಯರವರೇ ಆ ನೋಟೀಸ್ ತಲುಪಿದೆ.

2. ಅಧ್ಯಕ್ಷರ 69ನೇ ಹುಟ್ಟು ಹಬ್ಬಕ್ಕೆ ಶುಭ ಹಾರೈಕೆ

ಶ್ರೀ ಡಿ.ಬಿ. ಸದಾನಂದ ಗೌಡ : ನಾನು ವಿಶೇಷವಾಗಿ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾವ ಮಾಡಬೇಕು. ನಮ್ಮ ಸದನದ ಅತ್ಯುನ್ನತ ಸ್ಥಾನದಲ್ಲಿ ಕುಳಿತಂಥ ಮಾನ್ಯ ಅಧ್ಯಕ್ಷರು ತಮ್ಮ 69ನೇ ಹುಟ್ಟು ಹಬ್ಬವನ್ನು ಇವತ್ತು ಆಚರಿಸುತ್ತಾರೆಂದು ನಮಗೆಲ್ಲರಿಗೂ ತಿಳಿದು ಬಂತು. ಇಡೀ ಸದನದ ಪರವಾಗಿ ತಮಗೆ ಆ ದೇವರು ಇನ್ನೂ ಆಯುರಾರೋಗ್ಯ, ಐಶ್ವರ್ಯ ಹಾಗೂ ಸಕಲ ಭಾಗ್ಯಗಳನ್ನು ಕೊಡಲಿ ಹಾಗೂ ಸ್ಥಾನಗಳನ್ನು ದೇವರು ಕರುಣಿಸಲಿ ಎಂದು ಹೇಳಿ ಇಡೀ ಸದನದ ಪರವಾಗಿ ನಾನು ತಮಗೆ ಹಾರೈಸುತ್ತೇನೆ.

ಅಧ್ಯಕ್ಷರು : ಅದು ನನಗೇ ಗೊತ್ತಿರಲಿಲ್ಲ

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋದ ಪಕ್ಷದ ನಾಯಕರು) : ಮಾನ್ಯ ಸದಾನಂದ ಗೌಡರು ಇಲ್ಲಿ ಏನು ವಿಚಾರ ಪ್ರಸ್ತಾಪ ಮಾಡಿದ್ದಾರೆ ಹಾಗೆಯೆ ತಮಗೆ ಹುಟ್ಟುಹಬ್ಬದ ಶುಭಾಶಯಗಳನ್ನು ನಾವೆಲ್ಲರೂ ಕೋರುತ್ತೇವೆ. ಪ್ರತಿಪಕ್ಷದ ಎಲ್ಲಾ ಸದಸ್ಯರೂ ಕೂಡಿಕೊಂಡು ತಮಗೆ ಶುಭಾಶಯಗಳನ್ನು ಕೋರುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ತಮ್ಮದು ಇವತ್ತು ಹುಟ್ಟು ಹಬ್ಬ ಎಂದು ನನಗೂ ಗೊತ್ತಿರಲಿಲ್ಲ!

ಅಧ್ಯಕ್ಷರು : ಅದು ನನಗೂ ಗೊತ್ತಿರಲಿಲ್ಲ; ಅವರು 'who is who' ಪುಸ್ತಕ ನೋಡಿಕೊಂಡು ಬಂದು ಹೇಳುತ್ತಿದ್ದಾರೆ ಅಷ್ಟೇ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ತಮಗೆ ಶುಭಾಶಯಗಳನ್ನು ನಾವು ಕೋರುತ್ತೇವೆ. ನೀವು ಇರುವವರೆಗೂ ಸಹಿತ, ತಾವು ಬದುಕಿರುವವರೆಗೆ ಆರೋಗ್ಯವಂತರಾಗಿದ್ದು ಕ್ರಿಯಾಶೀಲರಾಗಿ ಇದ್ದು ರಾಜಕೀಯ ಸೇವೆಯಲ್ಲಿ ಇದೇ ರೀತಿ ತೊಡಗಿರಬೇಕು ಎನ್ನತಕ್ಕದ್ದು ನಮ್ಮೆಲ್ಲರ ಸದಿಚ್ಛೆ. ಇದು ತಮ್ಮ ಎಷ್ಟನೇ ಹುಟ್ಟಿದ ಹಬ್ಬ ಎಂದು ನಮಗೆ ಗೊತ್ತಿಲ್ಲ.

ಅಧ್ಯಕ್ಷರು : ಇರುವರೆಗೂ ನಾನು ಯಾವತ್ತೂ ಹುಟ್ಟುಹಬ್ಬದ ಆಚರಣೆ ಮಾಡಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇಲ್ಲೊಂದು ಸತ್ ಸಂಪ್ರದಾಯವನ್ನು ಹಿಂದಿನ ಮಾನ್ಯ ಅಧ್ಯಕ್ಷರು ಮಾಡುತ್ತಿದ್ದರು; ಏನೆಂದರೆ ಈ ಸದನದ ಸದಸ್ಯರುಗಳು, ಮಂತ್ರಿಗಳು ಅಥವಾ ಬೇರೆಯವರ ಹುಟ್ಟುಹಬ್ಬದ ದಿನ ಅವರು ಶುಭಾಶಯಗಳನ್ನು ಕೋರುತ್ತಿದ್ದರು. ಅದನ್ನು ಸಹಿತ ಇಲ್ಲಿ ಮಾಡಬಹುದು. ಇವತ್ತು ರಾಯಚೂರಿನ ಶಾಸಕರಾದ ಶ್ರೀಮಾನ್ ಭೋಸರಾಜು ಅವರಿಗೆ ಅಭಿನಂದನೆಗಳನ್ನು ನಾವು ಸಲ್ಲಿಸಬೇಕು. ಏಕೆಂದರೆ ಅವರು ಇವತ್ತಿನ ದಿನ ಈ "Who is Who" ಎನ್ನುವ ಬಯೋಡೇಟಾವನ್ನು ಓದಿದರು. ತಾವು ಆ ಪುಸ್ತಕವನ್ನು ಪ್ರಿಂಟ್ ಮಾಡಿ ಕೊಡಿಸಿದ್ದೀರಿ. ಅದನ್ನು ಓದಿ ತಮಗೇ ಗುರುತು ಮಾಡಿರತಕ್ಕದ್ದು ಅವರಿಗೂ ಸಹಿತ ಶುಭಾಶಯಗಳನ್ನು ಹೇಳಿ, ಈ ಸಂದರ್ಭದಲ್ಲಿ ವಂದನೆಗಳನ್ನು ಅರ್ಪಿಸಬೇಕು. ನಮ್ಮ ಉಪ ನಾಯಕರಾದಂತಹ ಶ್ರೀ ಸದಾನಂದಗೌಡರು ಇವತ್ತು ಇದೊಂದು ಸತ್ಸಂಪ್ರದಾಯ. ಹಾಕಿದ್ದಾರೆ ತಾವು ಆ ಸ್ಥಾನದಲ್ಲಿ ಕುಳಿತು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳತಕ್ಕದ್ದು ಬಹಳ ಮುಖ್ಯ ಸ್ವಾಮಿ.

ಅಧ್ಯಕ್ಷರು : ಎರಡೂ ಕಡೆಯೂ ತೆಗೆದುಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದೊಂದು ಸಂಪ್ರದಾಯ ಇತ್ತೀಚೆಗೆ ನಡೆಯುತ್ತಿದೆ. ಬಹಳ ಸಂತೋಷ. ಕೊನೆಯದಾಗಿ ಈ ವಿಚಾರದಲ್ಲಿ ನಾವೇನು ಹೇಳುತ್ತಿದ್ದೆವು, ಅದಕ್ಕೆ ಒಂದು ಟೈಮ್ ಲಿಮಿಟ್ ಇಲ್ಲದೇ 7-8, 10 ಜನ ಸದಸ್ಯರು ಪಾರ್ಟಿಸಿಪೇಟ್ ಮಾಡುವುದಕ್ಕೆ ಕ್ವೆಶ್ಚನ್ ಅವರ್ ಆದ ಮೇಲೆ ಅವಕಾಶ ಮಾಡಿಕೊಡಿ.

ಶ್ರೀ ಡಿ.ಬಿ. ಚಂದ್ರೇಗೌಡ : ನಾನು ಈ ವಿಚಾರದಲ್ಲಿ ಪ್ರತಿಪಕ್ಷಗಳನ್ನು ಅಭಿನಂದಿಸಬೇಕು. ನಾವು ಮಾಡಬೇಕಾದಂತಹ ಕೆಲಸಗಳನ್ನು ಅವರೇ ಮಾಡಿದ್ದಾರೆ. ಬೇರೆ ಕೆಲಸವಲ್ಲ, ಇವತ್ತಿನದು ಮಾತ್ರ, ತಮ್ಮ ಹುಟ್ಟುಹಬ್ಬಕ್ಕೆ ಸರ್ಕಾರದ ವತಿಯಿಂದ ನಮ್ಮೆಲ್ಲರ ವತಿಯಿಂದ, ಸದನದ ವತಿಯಿಂದ ಒಟ್ಟಾರೆ ರಾಜ್ಯದ ವತಿಯಿಂದಲೂ ಶುಭಾಶಯಗಳನ್ನು ಕೋರುತ್ತಿದ್ದೇನೆ. ತಮ್ಮ ಅವಧಿಯಲ್ಲಿ ಹೊಸ ಹೊಸ ಸಂಪ್ರದಾಯಗಳು, ಸೃಷ್ಟಿ ಆಗಿ ಇರುವ ಸಂಪ್ರದಾಯಗಳಿಗೆ ಗೌರವ ಬರುವ ಹಾಗೆ ನಾವು ನಡೆದುಕೊಳ್ಳಬೇಕು. ತಾವು ಆ ರೀತಿ ನಡೆಸಿದ್ದೀರಿ. ಅದಕ್ಕಾಗಿ ನಿಮಗೆ ಹಾರ್ದಿಕ ಶುಭಾಶಯಗಳು. ಹಾಗೆಯೇ ನಮ್ಮ ಮಿತ್ರರಾದ ಮಾನ್ಯ ಭೋಸರಾಜು ಅವರೂ ಕೂಡ ಇವತ್ತು ಹುಟ್ಟುಹಬ್ಬ ಎಂದು ಹೇಳಿದ್ದಾರೆ. ಅವರಿಗೂ ನಮ್ಮ ಶುಭಾಶಯಗಳನ್ನು ಇವತ್ತು ಸಮರ್ಪಣೆ ಮಾಡುತ್ತೇನೆ. ಮಾನ್ಯ ನಿಂಧ್ಯಾರವರು ಹೇಳಿದ ಹಾಗೆ ಆಯಾಯ ದಿವಸ ಯಾರ್ಯಾರ ಹುಟ್ಟುಹಬ್ಬ ಇರತ್ತದೆ ಎಂದು ನಮಗೆ ಗೊತ್ತಾಗುವುದಿಲ್ಲ ಹಳೆಯ ಸಂಪ್ರದಾಯ ಏನು ಅಂದರೆ.

ಅಧ್ಯಕ್ಷರು : ನಾನು ಎಲ್ಲಾ ಮಾನ್ಯ ಸದಸ್ಯರುಗಳ ಹುಟ್ಟಿದ ದಿನಾಂಕಗಳನ್ನು ಗುರ್ತಿಸಿ ಇಟ್ಟುಕೊಂಡಿದ್ದು, ಪ್ರತಿಯೊಬ್ಬ ಸದಸ್ಯರ ಹುಟ್ಟುಹಬ್ಬದ ದಿನಾಂಕದಂದು ಅವರಿಗೆ ಶುಭಾಶಯ ಪತ್ರ ಕಳುಹಿಸಿಕೊಡುತ್ತಿದ್ದೇನೆ. ನೀವುಗಳೆಲ್ಲರೂ ಇಂದು ನನ್ನ ಜನ್ಮ ದಿನದ ನಿಮಿತ್ತ ಶುಭಾಶಯಗಳನ್ನು ಕೋರಿರುವುದು ಬಹಳ ಸಂತೋಷ. ನಿಮ್ಮೆಲ್ಲರ ಸಹಕಾರ ಇದ್ದರೆ ಇದೇ ರೀತಿ ನಾನು ಮುಂದುವರೆಸಿಕೊಂಡು ಹೋಗುವುದಾಗಿ ನಿಮಗೆ ಆಶ್ವಾಸನೆ ನೀಡಬಲ್ಲೆ.

ಶ್ರೀ ಸಿ. ಚನ್ನಿಗಪ್ಪ : ದೇವರು ತಮಗೆ ತುಂಬು ಆರೋಗ್ಯ ಕರುಣಿಸಲೆಂದು ಪರಮಾತ್ಮನಲ್ಲಿ ನಾನು ಪ್ರಾರ್ಥಿಸಿಕೊಳ್ಳುತ್ತೇನೆ.

3. ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು : ಮಾನ್ಯ ರಾಮಲಿಂಗಾರೆಡ್ಡಿಯವರೆ, ನಿಮ್ಮ ಪ್ರಶ್ನೆ ಸಂಖ್ಯೆ 181 (1755)ಕ್ಕೆ ಸಂಬಂಧಿಸಿದಂತೆ ಉತ್ತರಿಸಲು ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಒಂದುವಾರ ಕಾಲಾವಕಾಶ ಕೇಳಿರುತ್ತಾರೆ.

ಶ್ರೀ ರಾಮಲಿಂಗಾರೆಡ್ಡಿ : ಆಗಬಹುದು

ಅಧ್ಯಕ್ಷರು : ಮಾನ್ಯ ಅಂಗಾರರವರೆ, ತಮ್ಮ ಪ್ರಶ್ನೆ ಸಂಖ್ಯೆ: 182(1989) ಬೇರೆ ಇಲಾಖೆಗೆ ವರ್ಗಾವಣೆಗೊಂಡಿರುವುದರಿಂದ, ಅದು ಬಂದ ನಂತರ ತೆಗೆದುಕೊಳ್ಳುತ್ತೇನೆ.

ಶ್ರೀ ಅಂಗಾರ : ಆಗಬಹುದು

ಹುಣಸೂರು ತಾಲ್ಲೂಕಿಗೆ ಕುಡಿಯುವ ನೀರಿನ ಯೋಜನೆಗೆ ಬಿಡುಗಡೆಯಾಗಿರುವ ಹಣ

183 (1863)

ಶ್ರೀ ಪಾಪಣ್ಣ.ವಿ (ಹುಣಸೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಹುಣಸೂರು ತಾಲ್ಲೂಕಿನಲ್ಲಿ ಸರ್ಕಾರ 43 ಕುಡಿಯುವ ನೀರು ಯೋಜನೆಗೆ 1999-2000ರಲ್ಲಿ ಮಂಜೂರು ಮಾಡಿರುವುದು ನಿಜವೆ?

ಆ) ಈ ಯೋಜನೆಗಳಿಗೆ ಸರ್ಕಾರ ಹಣ ಬಿಡುಗಡೆ ಮಾಡಿದೆ ಎಲ್ಲಾ ಕುಡಿಯುವ ನೀರು ಯೋಜನೆಗಳು ಸ್ಥಗಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಈ ಯೋಜನೆಗಳನ್ನು ಸಂಪೂರ್ಣ ಮಾಡಲು ಹಣ ಬಿಡುಗಡೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳಾವುವು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು :

ಅ) ಹೌದು